ಈ ದಿನ ಪ್ರಜಾಪ್ರಭುತ್ವದ ಕೊಲೆ ಆಗುತ್ತಿದೆ. ಶಾಸಕರಿಗೆ ರಕ್ಷಣೆ ಕೊಡಬೇಕು. ನೀವು ಈಗ ಈ ರೀತಿ ಮಾಡುತ್ತಿರುವುದು ಸರಿಯಲ್ಲ. ಇದು ಅಕ್ರಮ ಸಭೆ, ತಾವು ಅಕ್ರಮಕ್ಕೆ ದಾರಿ ಮಾಡಿಕೊಡಬಾರದು. ಈ ಸಭೆ ಸಂಪ್ರದಾಯ ಬಿಟ್ಟು ನಡೆಯುವಂತೆ ಆಗಬಾರದು. ಆದುದರಿಂದ ನಾನು ತಮ್ಮಲ್ಲಿ ಅತ್ಯಂತ ಕೃತಜ್ಞತೆಯಿಂದ ಮನವಿ ಮಾಡುತ್ತೇನೆ.....

ಅಧ್ಯಕ್ಷರು : ನೀವು ನನ್ನ ಮಾತನ್ನು ಕೇಳದಿದ್ದರೆ ನಾನು ಉಗ್ರವಾದ ಕ್ರಮವನ್ನು ತಮ್ಮ ಮೇಲೆ ಕೈಗೊಳ್ಳಬೇಕಾಗುತ್ತದೆ. ಶ್ರೀ ವಾಟಾಳ್ ನಾಗರಾಜ್‌ರವರು ಕಾರ್ಯಕಲಾಪಕ್ಕೆ ಬಹಳ ಅಡಚಣೆ ಉಂಟು ಮಾಡುತ್ತಿದ್ದಾರೆ. ಆದುದರಿಂದ ಇವತ್ತಿನ ಕಲಾಪಕ್ಕೆ ಅವರನ್ನು ಅಮಾನತ್ತು ಮಾಡಬೇಕೆಂದು ನಾನು ಹೇಳುತ್ತಿದ್ದೇನೆ.

(ಶ್ರೀ ವಾಟಾಳ್ ನಾಗರಾಜ್‌ರವರನ್ನು ಮಾರ್ಷಲ್‌ರವರು ಮತ್ತು ಅವರ ಸಿಬ್ಬಂದಿಯವರು ಅವರನ್ನು ಬಲವಂತವಾಗಿ ಎತ್ತಿಕೊಂಡು ಹೊರಕ್ಕೆ ಹಾಕಿದರು)

ಪ್ರಶ್ನೋತ್ತರಗಳು

ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು.

ಗುಲ್ಬರ್ಗ ಜಿಲ್ಲೆಯಲ್ಲಿ ತೊಗರಿ ಬೆಳೆ ಪರಿಹಾರ ಧನ.

722 - ಶ್ರೀ ಬಸವಂತರೆಡ್ಡಿ ಮೋತಕಪಲ್ಲಿ (ಸೇಡಂ) : ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗುಲಬರ್ಗಾ ಜಿಲ್ಲೆಯಲ್ಲಿ ರೈತರಿಗೆ ತೊಗರಿ ಪರಿಹಾರ ಧನವನ್ನು ನೀಡುವ ಕುರಿತು ದಿನಾಂಕ 10-2-1994 ರಂದು ಸದನದಲ್ಲಿ ಚರ್ಚೆಗೆ ಬಂದಾಗ 2 ಕೋಟಿ 7 ಲಕ್ಷ 67 ಸಾವಿರ ಉಳಿದಿರುವ ಪರಿಹಾರ ಧನ ಅತಿ ಶೀಘ್ರದಲ್ಲಿ ವಿತರಣೆ ಮಾಡಲಾಗುತ್ತದೆಂದು ಆಶ್ವಾಸನೆ ನೀಡಿರುವುದು ನಿಜವೇ?

ಆ) ಆದರಲ್ಲಿ ಇಲ್ಲಿಯವರೆಗೆ ರೈತರಿಗೆ ಎಷ್ಟು ಪರಿಹಾರ ಧನ ವಿತರಣೆ ಮಾಡಲಾಗಿದೆ?

ಇ) ಈ ಉಳಿದಿರುವ 2 ಕೋಟಿ 7 ಲಕ್ಷ 67 ಸಾವಿರ ಹಣದಲ್ಲಿ ಕೇವಲ 56 ಲಕ್ಷ ರೂ. ಬಿಡುಗಡೆ ಮಾಡಲಾಗಿದೆಯೆಂದು ತಿಳಿದಿರುವುದು ನಿಜವೇ?

ಈ) ಈ ಪ್ರಕಾರ ಪೂರ್ತಿ ಹಣ ಬಿಡುಗಡೆ ಮಾಡದೆ ಸ್ವಲ್ಪ ಮಟ್ಟಿಗೆ ಬಿಡುಗಡೆ ಮಾಡಿರುವುದರಿಂದ, ರೈತರಿಗೆ ವಿತರಣೆ ಮಾಡುವಲ್ಲಿ ತಾರತಮ್ಯವಾಗುವುದಿಲ್ಲವೆ?

ಉ) ಹಾಗಿದ್ದಲ್ಲಿ, ಈಗಾಲಾದರೂ ಅತಿ ಶೀಘ್ರದಲ್ಲಿಯೇ ವಿತರಣೆ ಮಾಡುವ ವ್ಯವಸ್ಥೆ ಮಾಡಲಾಗುವುದೇ?

ಶ್ರೀ ಎನ್. ಹುಚ್ಚಮಾಸ್ತಿಗೌಡ (ಕೃಷಿ ಸಚಿವರು) :

ಅ) ಹೌದು.

ಆ) ಉಳಿದಿರುವ ಹಣವಾದ 2.0767 ಕೋಟಿ ರೂ.ಗಳನ್ನು ಈಗಾಗಲೇ ಸರ್ಕಾರಿ ಆದೇಶ ದಿನಾಂಕ 22-3-94ರಲ್ಲಿ ಬಿಡುಗಡೆ ಮಾಡಲಾಗಿದೆ.

ಇ) ಉದ್ಭವಿಸುವುದಿಲ್ಲ.

ಈ) ಉದ್ಭವಿಸುವುದಿಲ್ಲ.